ಪ್ರ. ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು
ಸಿ.ಸಿ. ನಂ.**1534/2019.**

ದಿನಾಂಕಃ**17-01-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಶಿವಕುಮಾರ್ | ಚಾಸಾ-7<br>ಪ್ರಾಸಾ-5 |
| ತಂದೆಯ ಹೆಸರು | ಶಂಕರೇಗೌಡ | |
| ವಯಸ್ಸು | 53 ವರ್ಷ | |
| ಉದ್ಯೋಗ | ಹೆಚ್ ಸಿ ಮಲ್ಲಂದೂರು ಪೊಲೀಸ್ ಠಾಣೆ | |
| ವಾಸ | ಚಿಕ್ಕಮಗಳೂರು | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು 2019 ರಿಂದ 2019 ರವರೆಗೆ ಕಡೂರು ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 14.11.2018 ರಂದು ನಾನು ಪೊಲೀಸ್ ಠಾಣಾ ಪ್ರಭಾರದಲ್ಲಿ ಇದ್ದಾಗ ಸಂಜೆ 7 ಗಂಟೆಗೆ ಚಾಸಾ 1 ರವರು ಹಾಜರುಪಡಿಸಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊ.ಸಂ.203/2018 ರಂತೆ ಪ್ರಕರಣದ ದಾಖಲಿಸಿರುತ್ತೇನೆ ಹಾಗೂ ಪ್ರ.ವ.ವರದಿಯನ್ನು ಮೇಲಾಧಿಕಾರಿಯವರಿಗೆ ಮತ್ತು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ದೂರನ್ನು ಮತ್ತು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದೂರಿನಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು ಹಾಗೂ ಸದರಿ ಪ್ರ.ವ.ವರದಿಯನ್ನು ನಿಪಿ 5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ನಂತರ, ತನಿಖೆಗೆಂದು ಪ್ರಕರಣದ ಕಡತವನ್ನು ಚಾಸಾ-10 ರವರಿಗೆ ಹಸ್ತಾಂತರಿಸಿರುತ್ತೇನೆ.

ನಂತರ, ದಿಃ15.11.2018 ರಂದು ಚಾಸಾ 10 ರವರಿಗೆ ಆರೋಪಿಯು ಗೆದ್ಲೆಹಳ್ಳಿ ಬಸ್ಸು ನಿಲ್ದಾಣದ ಬಳಿ ಇದ್ದಾನೆ ಎಂದು ಮಾಹಿತಿ ಬಂದಿದ್ದು, ನಾನು ಮತ್ತು ಚಾಸಾ4, 8, 9 ರವರು ಚಾಸಾ 10 ರವರ ಜೊತೆ ಆರೋಪಿಯ ಪತ್ತೆ ಮತ್ತು ದಸ್ತಗಿರಿಗಾಗಿ ಇಲಾಖಾ ಜೀಪಿನಲ್ಲಿ ಹೋಗಿದ್ದು, ಸದರಿ ಸ್ಥಳದಲ್ಲಿ ಸಿಬ್ಬಂದಿಗಳು ಆರೋಪಿತರನ್ನು ಹಿಡಿದು

ಚಾಸಾ10 ರವರ ಮುಂದೆ ಹಾಜರುಪಡಿಸಿರುತ್ತೇವೆ. 2 ನೇ ಆರೋಪಿಯನ್ನು ನಾನು ಹಿಡಿದಿರುತ್ತೇನೆ. ಚಾಸಾ 4 ರವರು 1 ನೇ ಆರೋಪಿಯನ್ನು ಹಿಡಿದಿರುತ್ತಾರೆ. ಚಾಸಾ 8 ರವರು 3 ನೇ ಆರೋಪಿಯನ್ನು ಹಿಡಿದಿರುತ್ತಾರೆ.

ಆರೋಪಿತರನ್ನು ನೋಡಿದಲ್ಲಿ ಗುರುತಿಸುತ್ತೇನೆ. 1 ಮತ್ತು 3 ನೇ ಆರೋಪಿತರು ಮೃತಪಟ್ಟಿರುತ್ತಾರೆ. ಈ ದಿನ 2 ನೇ ಆರೋಪಿಯು ಗೈರುಹಾಜರಾಗಿದ್ದು 2 ನೇ ಆರೋಪಿಯ ಗುರುತಿನ ಬಗ್ಗೆ ತಮ್ಮ ತಕರಾರು ಇರುವುದಿಲ್ಲ ಎಂದು 2 ನೇ ಆರೋಪಿಯ ಪರ ವಕೀಲರು ಅರ್ಜಿ ಸಲ್ಲಿಸಿ ತಿಳಿಸಿರುತ್ತಾರೆ. ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀಸವಾಲುಃ **2** ನೇ ಆರೋಪಿ ಪರ ಶ್ರೀ**.**ಸಿ ವಿ ಎಸ್ ವಕೀಲರಿಂದ</u>

ದೂರನ್ನು ಚಾಸಾ1 ರವರು ಸಂಜೆ7 ಗಂಟೆಗೆ ತಂದುಕೊಟ್ಟಿರುತ್ತಾರೆ. ದೂರನ್ನು ನಾನು ಓದಿರುತ್ತೇನೆ. ರೂ.110/-ಹಣವನ್ನು ಚಾಸಾ 1 ರವರಿಗೆ ಯಾರು ಯಾವ ಸ್ಥಳದಲ್ಲಿ ನೀಡಿದರು ಎಂದು ದೂರಿನಲ್ಲಿ ನಮೂದು ಇದೆಯೇ ಎಂಬ ಬಗ್ಗೆ ನನಗೆ ನೆನಪಿಲ್ಲ. ಮುಂದುವರೆದು ಸಾಕ್ಷಿಯು ದೂರನ್ನು ಓದಿ ನೋಡಿ ಪರಮೇಶ್ವರಪ್ಪ ರವರು ಚಂದ್ರಪ್ಪ ರವರಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ, ಆದರೆ ಚಾಸಾ 1 ರವರಿಗೆ ಯಾರು ನೀಡಿರುವ ಬಗ್ಗೆ ನಮೂದು ಇದೆ ಎಂದು ನನಗೆ ಗೊತ್ತಿಲ್ಲ. ರೂ.110/-ರ ಮುಖ ಬಲೆ ನನಗೆ ಗೊತ್ತಿಲ್ಲ. ರೂ.110/-ರ ಹಣವನ್ನು ಸರ್ಕಾರಿ ಖಜಾನೆಗೆ ಸಲ್ಲಿಸಿರುವ ಬಗ್ಗೆ ನಮೂದು ಇದೆಯೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ 1 ರವರು 7 ಗಂಟೆಗೂ ಮುಂಚೆ ಯಾವುದೇ ದೂರು ನೀಡಿರುವುದಿಲ್ಲ.

ನಾನು ಮುಖ್ಯ ಪೇದೆಯಾಗಿ 2014 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ಆ ವೇಳೆಯಿಂದ ತನಿಖಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ನಿಪಿ 4 ದೂರಿನ 2 ನೇ ಪುಟದ 16 ನೇ ಸಾಲಿನಲ್ಲಿ ಸ್ಥಳದಲ್ಲೇ ಕುಳಿತು ಮಧ್ಯಾಹ್ನ 3.40 ರಿಂದ 4 ಗಂಟೆಯ ವರೆಗೂ ಪಿಸಿ ವಿನೋದ್ ರಾಜ್ ರವರಿಂದ ವರದಿ ತಯಾರಿಸಿ ಕಳುಹಿಸಿಕೊಟ್ಟಿದ್ದು ಕೇಸು ದಾಖಲು ಮಾಡಿ ಕೂಡಲೇ ದೂರವಾಣಿ ಮೂಲಕ ಮೊಕದ್ದಮೆ ಸಂಖ್ಯೆ ತಿಳಿಸಲು ಸೂಚಿಸಿದೆ ಎಂದರೆ ಸರಿ. ಹಾಗಾದರೆ 3.40 ರಿಂದ 4 ಗಂಟೆಯ ವರೆಗೂ ನಿಮಗೆ ಯಾವುದೇ ದೂರು ಬಂದಿಲ್ಲವೇ ಎಂದರೆ ಸಾಕ್ಷಿಯು ಅಬಕಾರಿ ಮೊಕದ್ದಮೆ ದಾಖಲಿಸಲು ದೂರು ಬಂದಿರುತ್ತದೆ ಎಂದು ನುಡಿಯುತ್ತಾರೆ.

ಮೊಕದ್ದಮೆ ಸಂಖ್ಯೆ 202 ನ್ನು ನಾನೇ ದಾಖಲು ಮಾಡಿರುತ್ತೇನೆ. ಸದರಿ ಮೊಕದ್ದಮೆಯಲ್ಲಿ ವಿಶ್ವನಾಥ ರವರು ದೂರುದಾರರಾಗಿರುತ್ತಾರೆ. ದೂರು ನೀಡುವಾಗ ನನ್ನ ಮುಂದೆ ಸಮವಸ್ತ್ರದ ಬಟ್ಟೆಯನ್ನು ಹಾಜರುಪಡಿಸಿರುವುದಿಲ್ಲ. ನನಗೆ ದೂರು ಪಡೆಯುವ ಮುನ್ನ ಆಸ್ಪತ್ರೆಯಿಂದ ಯಾವುದೇ ಸೂಚನ ಪತ್ರ ಬಂದಿರುವುದಿಲ್ಲ. ಮೊಕದ್ದಮೆ ಸಂ.202 ನ್ನು ದಾಖಲು ಮಾಡುವ ಕಾಲಕ್ಕೆ ದೂರುದಾರರು ಆರೋಪಿತರನ್ನು ನನ್ನ ಮುಂದೆ ಹಾಜರುಪಡಿಸಿರಲಿಲ್ಲ.

ಈ ಕೇಸು ದಾಖಲು ಮಾಡುವ ಪೂರ್ವದಲ್ಲಿ ನಾನು ಸ್ಥಳಕ್ಕೆ ಹೋಗಿರುವುದಿಲ್ಲ. ದಿಃ15.11.2018 ರಂದು ಬೆಳಗ್ಗೆ ಸುಮಾರು 11.30 ಕ್ಕೆ ಹೋಗಿರುತ್ತೇವೆ. ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಆರೋಪಿತರ ಪೋಟೋ ಅಥವಾ ಆಧಾರ್ ಕಾರ್ಡ್ ಇರಲಿಲ್ಲ. ಇದೇ ವ್ಯಕ್ತಿ ದಯಾನಂದ ಎಂದು ಕಂಡುಕೊಳ್ಳಲು ನಾನು ಆರೋಪಿಯಿಂದ ಆಧಾರ್ ಕಾರ್ಡು ಪಡೆದಿರುವುದಿಲ್ಲ. ಚಾಸಾ 10 ರವರಾದರೂ ಆರೋಪಿತರನ್ನು ಗುರುತಿಸಿರುತ್ತಾರೆಯೇ ಎಂದರೆ ಸಾಕ್ಷಿಯು ಚಾಸಾ 10 ರವರೇ ಆರೋಪಿತರನ್ನು ಗುರುತಿಸಿ ಅವರನ್ನು ಹಿಡಿಯಲು ತಿಳಿಸಿರುತ್ತಾರೆ. ಆರೋಪಿತರು ಬಸ್ಸು ನಿಲ್ದಾಣದಲ್ಲಿ ನಿಂತಿದ್ದರು. ಬೆಳಗ್ಗೆ 11.30 ಕ್ಕೆ ಚಾಸಾ 10 ರವರು ನಮಗೆ ಆರೋಪಿತರನ್ನು ಹಿಡಿಯಲು ಆದೇಶಿಸಿರುತ್ತಾರೆ. ಚಾಸಾ 10 ರವರಿಗೆ ಆರೋಪಿತರು ಬಸ್ಸು ನಿಲ್ದಾಣದ ಬಳಿ ಇದ್ದಾರೆ ಎಂದು ಬೆಳಗ್ಗೆ ಸುಮಾರು 11.15 ಕ್ಕೆ ಮಾಹಿತಿ ಬಂದಿರುತ್ತದೆ, ಸದರಿ ಮಾಹಿತಿಯನ್ನು ತಕ್ಷಣ ನಮಗೂ ತಿಳಿಸಿ ಕರೆದಿರುತ್ತಾರೆ. ನನ್ನ ಹೇಳಿಕೆಯಲ್ಲಿ ಆರೋಪಿತರನ್ನು ಹಿಡಿದು ಪಿಎಸ್ಐ ಮುಂದೆ ಹಾಜರುಪಡಿಸಿರುತ್ತೇವೆ ಎಂದು ನಮೂದು ಇದೆ ಎಂದರೆ ಸರಿ. ನಮ್ಮ ಜೊತೆ ಚಾಸಾ 10 ರವರು ಇದ್ದಿದ್ದರೆ ನಾವು ಆರೋಪಿತರನ್ನು ಅವರ ಮುಂದೆ ಹಾಜರುಪಡಿಸುವ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ ಎಂದರೆ ಸರಿ, ಸಾಕ್ಷಿಯು ನಾವು ಬಸ್ಸು ನಿಲ್ದಾಣದಲ್ಲಿಯೇ ಹಿಡಿದು ನಮ್ಮ ಜೊತೆಗೆ ಇದ್ದ ಚಾಸಾ10 ರವರ ಮುಂದೆ ಹಾಜರುಪಡಿಸಿರುತ್ತೇವೆ ಎಂದು ನುಡಿಯುತ್ತಾರೆ.

ಚಾಸಾ 10 ರವರ ಮಾತು ಕೇಳಿ ಚಾಸಾ 1 ರವರು ನೀಡಿದ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಪ್ರ.ವ. ವರದಿ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಮದ್ಯ ಮಾರಾಟ ಮಾಡಿರುವುದಿಲ್ಲ ಮತ್ತು ಅಲ್ಲಿ ಯಾವುದೇ

ಗಲಾಟೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೇಳಿಕೆಯನ್ನು ತನಿಖಾಧಿಕಾರಿಯಾದ ಚಾಸಾ11 ರವರ ಮುಂದೆ ದಿಃ15.11.2018 ರಂದು ಹೇಳಿಕೆ ನೀಡಿರುತ್ತೇನೆ, ಸಮಯ ನೆನಪಿಲ್ಲ. ನಾನು ಕೇಸಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.